ಆಫೀಸಿನವರೆಲ್ಲ ಅಘೋಷಿತವಾಗಿ ಚುಡಾಯಿಸುತ್ತಿದ್ದರು.

'ಐಸೀ... ಅಂಕಿತಾ, ದ ಮದರ್ ಆಫ್ ಒನ್ ತೌಸನ್ಡ್ ಕಿಡ್ಸ್...' ನಾನೂ ತಮಾಷೆಗಿಳಿದೆ.

'ಓಹ್ ಶಕ್ತೀ... ಇದು ತೀರಾ ಹಳೆಯ ಜೋಕು.' ಎಂದು ನಸುನಗುತ್ತಲೇ ಕನಲುದನಿಯಿಕ್ಕಿ ಹೇಳಿದ ಕರ್ನಲ್ ಚಾರಿ, ಇದ್ದಕ್ಕಿದ್ದಂತೆ ಕೆಳಕ್ಕಿಳಿದು, ಮೂಗಿನ ಘನಗಾತ್ರದ ಹೊಳ್ಳೆಗಳನ್ನು ತೋರಿದ ಮಾಸ್ಕನ್ನು ಮೇಲಕ್ಕೆತ್ತಿ ಸರಿಪಡಿಸಿಕೊಂಡ. ಅದರ ಕೇಸರೀಬಣ್ಣ ನಾಸಿಕರಂಧ್ರಗಳೊಳಗಿನ ಬ್ರಹ್ಮಾಂಡಕ್ಕೂ ಕೇಡೆಂಬಂತೆ ಅನ್ನಿಸಿಬಂತು.

'ರೈಟ್, ಕರ್ನಲ್...' ನಾನೇ ವಿಷಯಾಂತರಿಸಿದೆ. 'ಮಿಸೆಸ್ ಶಾರ್ವರೀಚಾರೀ ಹೇಗಿದ್ದಾರೆ?'

ಈ ಪ್ರಶ್ನೆಯಿಂದಾಗಿ ಕರ್ನಲ್ ಚಾರಿಯ ಮೋರೆಯಲ್ಲಿ ಕಂಡೂ ಕಾಣಿಸದಂತಹ ಮುಜುಗರ ತೋರಿಬಂತು. ಅಥವಾ, ನನಗೇ ಹಾಗನ್ನಿಸಿತೋ ಹೇಗೆ? ಈ ನಡುವೆ, ಆ ದಿವಸಗಳಲ್ಲಿ ಅಂದರೆ ಮಿಸೆಸ್ ಶಾರ್ವರೀಚಾರಿಯು ನನ್ನೊಡನೆ ಸಂಪರ್ಕ ಹೊಂದಿದ್ದ ದಿನಗಳಲ್ಲಿ, ಆಕೆಯ ಹಿಂದೆಮುಂದೆ ಬೆನ್ನಿಗೆ ಬಿದ್ದ ಬೇತಾಳದ ಹಾಗೆ ಸುತ್ತುತ್ತಿದ್ದ ಎರಡು ಅವಳಿ–ಹೆಣ್ಣುಮಕ್ಕಳೂ ನೆನಪಿಗೆ ಬಂದು, 'ಹೌದು. ನಿಮ್ಮ ಡಾಟರ್ಸ್ ಹೇಗಿದ್ದಾರೆ?' ಅಂತಲೂ ಕೇಳಿದೆ.

'ವೆಲ್... ದೆ ಆರ್ ಮ್ಯಾರೀಡ್.' ಚಾರಿಯ ಕಣ್ಣುಗಳು ಒಮ್ಮೆಂದೊಮ್ಮೆ ಸೆಳಕಿಕೊಂಡವು. 'ಇಬ್ಬರಿಗೂ ಎರಡು ವರ್ಷದ ಹಿಂದೆ ಮದುವೆ ಆಯಿತು. ದೊಡ್ಡವಳು ಬಾಲಿನಲ್ಲಿದ್ದಾಳೆ. ಚಿಕ್ಕವಳು ಕೊಲೊಂಬೋ... ಇಬ್ಬರಿಗೂ ಒಂದೊಂದು ಮಗು ಆಗಿದೆ...'

'ಹೌದೇ? ಎಲ್ಲಾ ನಿನ್ನೆ ಮೊನ್ನೆ ನಡೆದಂತಿದೆ.' ಮಾತಿನಲ್ಲಿ ಸೋಗಿನ ಅಚ್ಚರಿ ತುಳುಕಿಸಿ ಆಡಿದೆ.

'ಯೆಸ್, ಟೈಮ್ ಜಸ್ಟ್ ಫ್ಲೈಸ್ ಯು ನೋ... ಹಕ್ಕಿ ಹಾರುತಿದೆ ಅನ್ನೋ ಪದ್ಯವೇ ಇದೆಯಲ್ಲಾ?' ಅಂತಂದ ಕರ್ನಲ್ ಚಾರಿ, ಅದೇ ನೇರಕ್ಕೆ ಸೈದ್ಧಾಂತಿಕವಾಗಿ ಇನ್ನೇನೋ ಆಡಹೊರಟನೇನೋ, ನಾನೇ ಮಾತಿನ ಉಮೇದಿನ ನಡುವೆ, 'ಹಾಗಾದರೆ, ಅಷ್ಟು ದೊಡ್ಡ ಮನೆಯಲ್ಲಿ ನೀವಿಬ್ಬರೇ ಇರುತಿರೇನು?' ಎಂದು ಅನಾಮತ್ತನೆ ಕೇಳಿಬಿಟ್ಟೆ.

ಕೇಳಿಯಾದ ಮೇಲೆ ಯಾಕಾದರೋ ಕೇಳಿದೆನೋ ಅಂತನ್ನಿಸಿತು.

ಎಲ್ಲದಕ್ಕು ಮೊದಲು ಕರ್ನಲ್ ಚಾರಿಯ ಮೋರೆಯಲ್ಲಿ ತುಸುವೇ ಕಸಿವಿಸಿ ತೊಟ್ಟಿಕ್ಕಿ ತೋರಿಬಂತು. ಕಸಿವಿಸಿಯ ಆಚೆ, 'ವೆಲ್, ವಿ ಜಸ್ಟ್ ಸ್ಪ್ಲಿಟ್ ರೀಸೆಂಟ್ಲೀ – ಯು ನೋ, ಈ ಪ್ಯಾಂಡೆಮಿಕ್ ಶುರುವಾಗೋಕೆ ಮುಂಚೆ ಬೇರೆ ಆದಿವಿ...' ಎಂದು ಅವನು, ಸಾಫುಸಾಫಾಗಿ ಮತ್ತು ಅಷ್ಟೇ ನಿರ್ಭಾವುಕವಾಗಿ ಹೇಳಿದ್ದಾಯಿತು. ತುಸುವೇ ತಡೆದು, 'ಮನಸ್ಸು ದೊಡ್ಡದಿದ್ದರೆ ಮನೆಯೆಲ್ಲಿ ದೊಡ್ಡದನಿಸುತ್ತೆ, ಬಿಡಿ – ಶಕ್ತೀ?' ಅನ್ನುತ್ತ, ನಾನು ಕೇಳಿದ ಪ್ರಶ್ನೆಗಿಂತಲೂ ದೊಡ್ಡದಾದ ಸಮಜಾಯಿಷಿಯನ್ನು ಅವನು ಉತ್ತರದೊಡನೆ ಬೆಸೆದಿದ್ದೂ ಆಯಿತು. 'ಆಕ್ಚುಅಲೀ ಯೆಸ್, ನಾವಿಬ್ಬರೇ ಇರುತೀವಿ. ನಾನು ಮತ್ತು ನನ್ನ ನಾಯಿ ಝೋಯಾ... ಇಬ್ಬರೇ...' ಅಂತಿನ್ನೊಂದು ಕೊಸರುಮಾತನ್ನೂ ಆಡಿದ್ದಾಯಿತು. ಅಲ್ಲದೆ, ಈ ಎಲ್ಲ ಮಾತುಗಳ ಒಡನೊಡನೆ ಮತ್ತು ಕಟ್ಟಕಡೆಯಲ್ಲಿ, ಅವನೊಂದು ಹತಾಶೆಯ ನಿಟ್ಟುಸಿರು ಹೊರದಬ್ಬಿ, ಆಕಾಶದತ್ತಲೊಮ್ಮೆ ನೋಡಿ, ಮುಂದೇನು ಕಾದಿದೆಯೋ ಅಂತೆಂಬ ಚರ್ಯೆ ತಾಳಿದ್ದೂ ಆಯಿತು.

ಈ ಶಾರ್ವರೀಚಾರಿ ಮತ್ತು ಕರ್ನಲ್ ಚಾರಿ – ತಮ್ಮೆರಡೂ ಹೆಣ್ಣುಮಕ್ಕಳು ಮದುವೆಯಾಗಿ, ತಲಾವೊಂದೊಂದು ಹೆತ್ತು, ಇವರಿಬ್ಬರೂ ಅಜ್ಜಿ–ತಾತನ ಪಟ್ಟದಕ್ಕಿಸಿಕೊಂಡ ಮೇಲೂ ವಿರಸದಾಂಪತ್ಯವೆಂದು ಬೇರ್ಪಟ್ಟಿದ್ದಾರೆಂಬ ಸಂಗತಿಯು ನನ್ನನ್ನೇಕೋ ಕಲಕಿಬಿಟ್ಟಿತು. ಬದುಕಿನಲ್ಲಿ ಬೇಕುಬೇಕಾದ್ದೆಲ್ಲ ಇದ್ದೂ, ಅಥವಾ, ಬೇಕುಬೇಕಾದ್ದನ್ನೆಲ್ಲ ದಕ್ಕಿಸಿಕೊಳ್ಳತಕ್ಕ ಹಣಕಾಸು ಇದ್ದೂ – ಮುಪ್ಪೆಂಬ ಮುಪ್ಪಿಗೆ ತುಸುಮುನ್ನಿನ ವಯಸ್ಸಿನಲ್ಲಿ ವೈವಾಹಿಕ ವಿಚ್ಛೇದನಕ್ಕೀಡಾಗಬಹುದೆಂಬ